**ಎಸ್.ಸಿ. ನಂ. 36/2014**

**ದೋ.ಸಾ. : 46 ಪ್ರಾ.ಸಾ. : 22**

ಸಾಕ್ಷಿಯ ಹೆಸರು : ರಾಮದಾಸ ನಾಗಪ್ಪ ಕುತ್ತಳಕರ

**ಸರಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 311 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕರಿಸಲ್ಪಟ್ಟ ಮೇರೆಗೆ, ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆ.**

**ದಿನಾಂಕಃ 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

7. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಸಲ್ಲಿಸಿದಂತಹ ಸಿ.ಡಿ.ಯು ತುಂಡಾಗಿದ್ದ ಕಾರಣ, ಸದರಿ ಸಿ.ಡಿ.ಯನ್ನು ಮುಖ್ಯ ವಿಚಾರಣೆಯ ಕಾಲಕ್ಕೆ ನಿಶಾನೆಗೊಳಿಸಿರುವುದಿಲ್ಲ. ಆ ನಂತರ ಕದ್ರಾ ಪೊಲೀಸ್ ಠಾಣಾಧಿಕಾರಿಯು ಸದರಿ ಸಿ.ಡಿ. ಯ ಮತ್ತೊಂದು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಈಗ ಸಾಕ್ಷಿಗೆ ತೋರಿಸಲಾಗಿ, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಸಿ.ಡಿ.ಯನ್ನು ನಿಪಿ-91 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದಃ-**

8. ಈಗ ಹಾಜರುಪಡಿಸಿರುವ ನಿಪಿ-91 ಸಿ.ಡಿ.ಯಲ್ಲಿ ಸಂಗ್ರಹಿಸಿರುವ ಫೋಟೋಗಳನ್ನು ಯಾರು ಹಾಗೂ ಯಾವ ಉಪಕರಣದಿಂದ ಭರಣ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಮ್ಮ ಪೊಲೀಸ್ ಸಿಬ್ಬಂದಿಗಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-91 ಸಿ.ಡಿ.ಯಲ್ಲಿರುವ ಫೋಟೋಗಳನ್ನು ಖುದ್ದಾಗಿ ನಾನು ಭರಣ ಮಾಡಿಲ್ಲ ಎಂದರೆ ಸಾಕ್ಷಿಯು, ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ